# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.20/2021

Pw-02

Cw-02

| | |
|---|---|
| ಸಾಕ್ಷಿದಾರರ ಹೆಸರುಃ | ಗುಡ್ಡಪ್ಪ ಹರಿಜನ |
| ತಂದೆಃಗಂಡನ ಹೆಸರುಃ | ಯಲ್ಲಪ್ಪ |
| ವಯಸ್ಸುಃ | 41 ವರ್ಷ |
| ಉದ್ಯೋಗಃ | ಹಮಾಲಿ |
| ವಾಸ ಸ್ಥಳಃ | ಯತ್ತಿನಹಳ್ಳಿ |

**ದಿನಾಂಕ:21.03.2024 ರಂದು ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

ನಾನು ಎ.ಪಿ.ಎಂ.ಸಿಯಲ್ಲಿ ಹಮಾಲಿ ಕೆಲಸ ಮಾಡುತ್ತೇನೆ. ಈಗ್ಗೆ 03 ವರ್ಷದ ಹಿಂದೆ ಪೊಲೀಸರು ನನ್ನನ್ನು ಮಳೀಮಠ ಕಾಂಪ್ಲೆಕ್ಸ ಹತ್ತಿರ ಕರೆಸಿ ಅಲ್ಲಿ ನಿಂಗಪ್ಪ ಮತ್ತು ಗಣೇಶನ ಕೊಲೆಯಾದ ವಿಷಯಕ್ಕೆ ಸಂಬಂಧಪಟ್ಟಂತೆ ನಿಪಿ-15 ಶವ ಪಂಚನಾಮೆ ಮಾಡಿದ್ದಾಗ ನಾನು ಅದಕ್ಕೆ ನಿಪಿ-15(ಬಿ) ರಂತೆ ಸಹಿ ಮಾಡಿದ್ದೇನೆ. ಫೋಟೋಗಳನ್ನು ನಿಪಿ-16 ರಿಂದ 18 ಅಂತಾ ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಯು.ಎನ್.ಜಿ ವಕೀಲರಿಂದಃ**

ಚಾಸಾ-1, ನಾನು ಒಂದೇ ಜಾತಿಯವರು. ನಿಪಿ-15 ರಲ್ಲಿ ಏನು ಬರೆದಿದೆ ಅಂತಾ ವೈಯಕ್ತಿಕ ಮಾಹಿತಿ ಇಲ್ಲ. ಎಪಿಎಂಸಿ ಯಲ್ಲಿ ಹಮಾಲಿ ಕೆಲಸ ಮಾಡುತ್ತೇನೆ. ಬೆಳಿಗೆ 8.00 ಗಂಟೆಗೆ ಕೆಲಸಕ್ಕೆ ಹೋಗಿ ಸಾಯಂಕಾಲ ಬರುತ್ತೇನೆ. ನಿಪಿ-16 ರಿಂದ 18 ಫೋಟೋಗಳಲ್ಲಿ ಶವ ಬಿಟ್ಟು ಬೇರೆ ವಸ್ತುಗಳು ಕಾಣುವುದಿಲ್ಲ. ನಿಪಿ-15 ನ್ನು ಬೆಳಿಗ್ಗೆ 9.00 ರಿಂದ 12.00

ಗಂಟೆಯವರೆಗೆ ಮಾಡಿದರು. ಚಾಸಾ-1 ಮತ್ತು ನಾನು ದಿನಾಲು ಭೇಟಿಯಾಗುತ್ತೇನೆ. ಚಾಸಾ-1 ಅವರಿಗೆ ಸಹಾಯಮಾಡಲು ಸುಳ್ಳು ಸಾಕ್ಷಿ ಹೇಳುತ್ತೇನೆಂದರೆ ಸರಿಯಲ್ಲ. ನಾನು ಶವವನ್ನು ಹೊರಳಾಡಿಸಿ ನೋಡಿಲ್ಲ. ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸುಳ್ಳು ಸಾಕ್ಷಿ ಹೇಳಿದ್ದೇನೇಂದರೆ ಸರಿಯಲ್ಲ. ನಿಪಿ-15 ನ್ನು ಯಾರು ಬರೆದರು ಮಾಹಿತಿ ಇಲ್ಲ. ಮೃತ ನಿಂಗಪ್ಪನಿಗೆ ರಾಣೇಬೆನ್ನೂರಿನ ಕೋರ್ಟಿನಲ್ಲಿ ಕೊಲೆ ವಿಚಾರಕ್ಕೆ ಸಂಬಂಧಪಟ್ಟಂತೆ ಶಿಕ್ಷೆ ಆಗಿತ್ತು ಎಂದರೆ ಗೊತ್ತಿಲ್ಲ.

**<u>ಮರು ವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.